KIND ATTENTION - POST CONTINUATION ORDER.

ಕರ್ನಾಟಕ ಸರ್ಕಾರ

ಸಂಖ್ಯೆ: ಪಿಯು/ಸಿಬ್ಬಂದಿ-2/ಉನೇ/ಹುಮು/47/2013-14

ನಿರ್ದೇಶಕರ ಕಚೇರಿ.
ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರಂ 18ನೇ ಅಡ್ಡರಸ್ತೆ,
ಬೆಂಗಳೂರು-560012.
ದಿನಾಂಕ: 19/08/2017

## ಜ್ಞಾಪನ

ವಿಷಯ: ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿನ ಬೋಧಕ-ಬೋಧಕೇತರ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 86 ಯೋಯೋಕ 203 ದಿನಾಂಕ 11-08-2014.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 04 ಬಿಪಿಇ 2017 ದಿನಾಂಕ 01.02.2017.
3. ಸರ್ಕಾರದ ಆದೇಶ ಸಂಖ್ಯೆ: ಇಡಿ 73 ಯೋಯೋಕ 2017 ದಿನಾಂಕ: 03-04-2017

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಬೋಧಕ-ಬೋಧಕೇತರ ಹುದ್ದೆಗಳನ್ನು ಮುಂದುವರೆಸುವ ಸಂಬಂಧ, ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಯೋಜನೇತರಡಿಯಲ್ಲಿ ಬರುವ ಎಲ್ಲಾ ಹುದ್ದೆಗಳನ್ನು ಶ್ವಾಶ್ವತ ಹುದ್ದೆಗಳೆಂದು ಹಾಗು ಯೋಜನೆಯಡಿ ಬರುವ ಹುದ್ದೆಗಳನ್ನು ತಾತ್ಕಾಲಿಕ ಹುದ್ದೆಗಳೆಂದು ಸ್ಪಷ್ಟೀಕರಿಸಿ ಅಂತಿಮ ಅಧಿಸೂಚನೆಯನ್ನು ಗೆಜೆಟ್‌ನಲ್ಲಿ ಪ್ರಕಟಿಸಿದೆ. ಆದುದರಿಂದ, ಸದರಿ ಹುದ್ದೆಗಳ ಮುಂದುವರಿಕೆಗೆ ಪ್ರತ್ಯೇಕವಾದ ಆದೇಶದ ಅವಶ್ಯಕತೆಯಿಲ್ಲವೆಂದು ಉಲ್ಲೇಖ-1ರಲ್ಲಿ ನಿರ್ದೇಶನ ನೀಡಲಾಗಿದೆ.

ಉಲ್ಲೇಖ-2ರಂತೆ, 2017-18ನೇ ಆರ್ಥಿಕ ವರ್ಷದಿಂದ ಮುಂದುವರೆದಂತೆ ಆಯವ್ಯಯದಲ್ಲಿನ ಯೋಜನೆ-ಯೋಜನೇತರ ನಡುವಿನ ಭಿನ್ನತೆಯನ್ನು ತೆಗೆದುಹಾಕಲಾಗಿದೆ. ಅದರಂತೆ 2016-17ನೇ ಸಾಲಿನವರೆಗೆ ಪ್ರತ್ಯೇಕವಾಗಿ ಭರಿಸಲಾದ ವೆಚ್ಚಗಳನ್ನು ಒಂದೇ ಲೆಕ್ಕ ಶಿರ್ಷಿಕೆ (Budget Line)ಯಡಿ ಭರಿಸಬಹುದಾಗಿದೆ.

....... 2

ಉಲ್ಲೇಖ-3ರಂತೆ, 2017-18ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿ ವೇತನವನ್ನು ಭರಿಸಲು ಸರ್ಕಾರದಿಂದ ಅನುದಾನ ಬಿಡುಗಡೆಗೊಳಿಸಿ ವೆಚ್ಚ ಅನುಮತಿಸಲಾಗಿರುತ್ತದೆ. ಆದುದರಿಂದ, ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಯೋಜನೆ ಮತ್ತು ಯೋಜನೇತರ ಅಡಿ ಬರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ವೇತನ ಬಿಡುಗಡೆ ಮಾಡಲು ಸೂಚಿಸಿದೆ.

ನಿರ್ದೇಶಕರು, 19/8/17
ಪದವಿ ಪೂರ್ವ ಶಿಕ್ಷಣ ಇಲಾಖೆ

**ಪ್ರತಿಗಳು:**

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3) ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು ಮತ್ತು ತಾಲ್ಲೂಕು ಖಜಾನಾಧಿಕಾರಿಗಳು.
4) ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ.
5) ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರುಗಳಿಗೆ.
6) ಇ- ಆಡಳಿತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
7) ಕಚೇರಿ ಪ್ರತಿ.